**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.868/2024</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಅಬಕಾರಿ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿ ಃ 1 ಲಕ್ಷ್ಮೀ ಗಂಡ ರಾಜು ರಾಠೋಡ
ವಃ 28 ವರ್ಷ, ಉಃ ಕೂಲಿ ಕೆಲಸ

2. ರಾಜು ತಂದೆ ಗುಂಡಪ್ಪ @ ಗುಂಡ್ಯಾ ರಾಠೋಡ
ವಃ 35 ವರ್ಷ, ಉಃ ಮನೆ ಮಾಲೀಕ
ಇಬ್ಬರೂ ಸಾಃ ಹಾಜಿ ಸರವರ ತಾಂಡ ಸೇಡಂ ಪಟ್ಟಣದ
ತಾಃ ಸೇಡಂ, ಜಿಃಕಲಬುರಗಿ

----

**<u>ದೋ ಷಾ ರೋ ಪ ಣೆ</u>**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 25-11-2022 ರಂದು ಬೆಳಗ್ಗೆ 08.00 ಗಂಟೆ ಸುಮಾರಿಗೆ, ಸಿಬ್ಬಂದಿ ಹಾಗೂ ಪಂಚರೊಂದಿಗೆ ಅಬಕಾರಿ ಅಕ್ರಮಗಳನ್ನು ಪತ್ತೆ ಹಚ್ಚಲು ಸೇಡಂ ಶಹರದ ಹಾಜಿ ಸರವರ್ ತಾಂಡಾದಲ್ಲಿ ಆರೋಪಿತರ ಮನೆ ಮೇಲೆ ಅಬಕಾರಿ ದಾಳಿ ಮಾಡಿ ಶೋಧನೆ ಮಾಡಿದಾಗ ಮನೆಯ ಎರಡು ಕೋಣೆಗಳಿಂದ ಕೂಡಿದ್ದು, ಮೊದಲನೆ ಕೋಣೆಯ ಮದ್ಯದಲ್ಲಿ 20 ಲೀ ಅಳತೆಯ ನೀಲಿ ಬಣ್ಣ ಮಿಶ್ರಿತ ಬಿಳಿ ಬಣ್ಣದ ಪ್ಲಾಸ್ಟೀಕ ಬಕೇಟಿನಲ್ಲಿ 20 ಲೀ ಕಲಬೇರಿಕೆ ಸೇಂದಿ , 10 ಲೀ ಅಳತೆಯ ಕೇಸರಿ ಬಣ್ಣದ ಪ್ಲಾಸ್ಟಿಕ ಕೊಡದಲ್ಲಿ 10 ಲೀ ಸೇಂದಿ , 500 ಗ್ರಾಂ ಸೇಂದಿ ಪೇಸ್ಟ ಹಾಗೂ 500 ಗ್ರಾಂ ಸಿ ಹೆಚ್ ಪೌಡರ ಮಾರಾಟದ ಉದ್ದೇಶಕ್ಕಾಗಿ ಸಂಗ್ರಹಿಸಿಟ್ಟಿರುವುದು ಕಂಡು ಬಂದದ್ದು, ಸದರಿಯವುಗಳನ್ನು ಜಪ್ತಿಪಡಿಸಿಕೊಂಡದ್ದು ಹಾಗೂ ಸದರಿಯವುಗಳನ್ನು ರಸಾಯನಿಕ ಪರೀಕ್ಷೆಗೆ ಒಳಪಡಿಸಲಾಗಿ ಸದರಿ ಸೇಂದಿ, ಸೇಂದಿ ಪೇಸ್ಟ ಹಾಗೂ ಸಿ.ಹೆಚ್ ಪೌಡರ ಮಾನವ ದೇಹಕ್ಕೆ ಹಾನಿಕಾರಕ ಎಂದು ದೃಢಪಟ್ಟಿದ್ದು, ಕಾರಣ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 38(ಎ) ಮತ್ತು ಭಾ.ದಂ.ಸಂ. ಕಲಂ 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 19-06-2026 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.868/2024**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಅಬಕಾರಿ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿಃ- 1 ಲಕ್ಷ್ಮೀ ಗಂಡ ರಾಜು ರಾಠೋಡ
ವಃ 28 ವರ್ಷ, ಉಃ ಕೂಲಿ ಕೆಲಸ
ಸಾಃ ಹಾಜಿ ಸರವರ ತಾಂಡ ಸೇಡಂ ಪಟ್ಟಣದ
ತಾಃ ಸೇಡಂ, ಜಿಃಕಲಬುರಗಿ ಹಾಗೂ ಇನ್ನೊಬ್ಬರು

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೊ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 19-06-2026 ಪ್ರ.ದ.ನ್ಯಾ.ದಂ. ಸೇಡಂ.